**ಸಾಕ್ಷಿಯನ್ನು ದಿಃ01.122025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಚಿಕ್ಕೇಗೌಡರಿಗೆ ಜಗದೀಶ ಮತ್ತು ರಮೇಶ ಎಂಬ ಮಕ್ಕಳು ಇರುವುದು ಗೊತ್ತು.

2. ನಿಮ್ಮ ತಮ್ಮ ಸದಾಶಿವ ರವರು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಜಗದೀಶ ಹಾಗೂ ರಮೇಶ ರವರಿಗೆ ಎಷ್ಟು ವಯಸ್ಸಾಗಿತ್ತು ಎಂದರೆ, ನನಗೆ ಗೊತ್ತಿಲ್ಲ.

3. ನಿಂಗೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ.

4. ಚಿಕ್ಕೇಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ 3 ಜನ ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನೀವು ನಿಮ್ಮ ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ, ಇಲ್ಲ.

5. ಚಿಕ್ಕೇಗೌಡರಿಗೆ ಜಯಣ್ಣ, ಪ್ರೇಮಾ ಹಾಗೂ ಶೋಭಾ ಎಂಬ ಮಕ್ಕಳು ಸಹ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

6. ದಾವಾ ಸ್ವತ್ತು ರಮೇಶ, ಜಗದೀಶ, ಜಯಣ್ಣ, ಪ್ರೇಮಾ ಹಾಗೂ ಶೋಭಾ ರವರಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ.

7. ನಿಮ್ಮ ತಮ್ಮ ಸದಾಶಿವ ದಾವಾ ಸ್ವತ್ತನ್ನು ಕ್ರಯ ಮಾಡಬೇಕಾದರೆ ಕಾನೂನು ಬದ್ಧ ವಾರಸುದಾರರಿಂದ ಸಹಿ ಪಡೆದಿದ್ದಾರಾ ಎಂದರೆ, ಜಗದೀಶ, ಕಾಳೇಗೌಡ, ಚಿಕ್ಕೇಗೌಡ ಹಾಗೂ ದಶರಥ ರವರಿಂದ ಪಡೆದಿದ್ದಾರೆ. ರಮೇಶ ಎನ್ನುವವರು ಮೈನರ್ ಇದ್ದ ಕಾರಣ ಪಡೆದಿಲ್ಲ.

8. ದಾವಾ ಸ್ವತ್ತನ್ನು ಖರೀದಿ ಮಾಡುವಾಗ ರಮೇಶ್ ರವರು ಮೈನರ್ ಎಂಬ ಬಗ್ಗೆ ದಾಖಲೆ ಪರಿಶೀಲನೆ ಮಾಡಿದ್ದಾರಾ ಎಂದರೆ, ದಾಖಲೆ ನೋಡಿ ಖರೀದಿ ಮಾಡಿರುತ್ತಾರೆ.

9. ನಿಡಿ - 1 ರ ಕ್ರಯಪತ್ರದಲ್ಲಿ ಎಲ್ಲೂ ಸಹ ರಮೇಶ್ ರವರು ಮೈನರ್ ಎಂದು ನಮೂದು ಇಲ್ಲ ಎಂದರೆ, ನನಗೆ ಮಾಹಿತಿ ಇಲ್ಲ.

10. ನಿಡಿ-1 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿದೆ.

11. ನಿಮಗೆ ಸ.ನಂ.27 ರ ಜಮೀನಿನ ಪಕ್ಕ ಎಷ್ಟು ಜಮೀನು ಇದೆ ಎಂದರೆ, ಅಕ್ಕಪಕ್ಕ ಜಮೀನು ಇಲ್ಲ.

12. ಸ.ನಂ.19 ರ ಹಿಂಭಾಗದಲ್ಲಿ ಸ.ನಂ.4 ಮತ್ತು 5 ರಲ್ಲಿ ಒಟ್ಟು 15 ಎಕರೆ ಇದೆ.

13. ಸದರಿ 15 ಎಕರೆ ಬಿಟ್ಟು ನನಗೆ ಸ.ನಂ.27 ರಲ್ಲಿ 14 ಗುಂಟೆ, ಸ.ನಂ.136 ರಲ್ಲಿ 2 ಎಕರೆ ಸ.ನಂ.1 ರಲ್ಲಿ 10 ಗುಂಟೆ ಇದೆ.

14. ನಿಪಿ - 3 ರಲ್ಲಿರುವ ಫೋಟೋದಲ್ಲಿರುವವರು ರಮೇಶ. ಅವರು ದಿಃ 30.08.1966 ರಲ್ಲಿ ಜನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

15. ನೀವು ಸೃಷ್ಟಿಸಿರುವ ನಿಡಿ ನಿಡಿ-1 ರ ಕ್ರಯಪತ್ರದ ಸಮಯದಲ್ಲಿ ರಮೇಶರವರಿಗೆ 21 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

16. ಸ.ನಂ.19 ರಲ್ಲಿ 21 ಗುಂಟೆ ಮಾತ್ರ ಚಿಕ್ಕೇಗೌಡರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅದರಲ್ಲಿ ಚಿಕ್ಕೇಗೌಡರು ಹಾಗೂ ಉಳಿಕೆ ವಾದಿಗಳು ಆಗ ಜಂಟಿ ಸ್ವಾಧೀನ ಹೊಂದಿದ್ದರು ಎಂದರೆ, ಸರಿಯಲ್ಲ, ಚಿಕ್ಕೇಗೌಡರು ಸ್ವಾಧೀನದಲ್ಲಿ ಇದ್ದರು. ಅವರು ಎಷ್ಟು ವರ್ಷದಿಂದ ಸ್ವಾಧೀನದಲ್ಲಿದ್ದರು ಎಂದು ನನಗೆ ಗೊತ್ತಿಲ್ಲ.

17. ದಾವಾ ಸ್ವತ್ತು ನನಗೆ ದಿಃ 11.10.1999 ರಲ್ಲಿ ವರ್ಗಾವಣೆಯಾಗಿದೆ.

18. ದಾವಾ ಸ್ವತ್ತನ್ನು ಚಿಕ್ಕೇಗೌಡರು, ನಿಮ್ಮ ತಂದೆ ರುದ್ರಪ್ಪರವರಿಗೆ ವರ್ಷಕ್ಕೆ ಬೆಳೆ ಬೆಳೆದು ಅರ್ಧ ಭಾಗ ನೀಡುವಂತೆ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ, ನಮ್ಮ ತಂದೆ 1961 ರಲ್ಲಿ ಕಾಲವಾಗಿದ್ದರು.

19. ನಂತರ ನಿಮ್ಮ ತಮ್ಮ ಪಿ.ಆರ್.ಸಾದಶಿವಪ್ಪನವರಿಗೆ ವಾದಿ ಹಾಗೂ ಅವರ ತಂದೆ ಬೆಳೆ ಬೆಳೆದುಕೊಳ್ಳಲು ನೀಡಿದ್ದರು ಎಂದರೆ ಸರಿಯಲ್ಲ. ಚಿಕ್ಕೇಗೌಡರು ಮರಣ ಹೊಂದರುವವರೆಗ ನೀವು ಅರ್ಧ ಬೆಳೆ ಅವರಿಗೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ.

20. ಚಿಕ್ಕೇಗೌಡರು ಮೃತರಾದ ನಂತರ ಅವರ ವಾರಸುದಾರು ಅರ್ಧ ಬೆಳೆ ಕೇಳಿದಾಗ ನಮ್ಮ ಹೆಸರಿನಲ್ಲಿದೆ ನಾವು ಕೊಡುವುದಿಲ್ಲ ಎಂದು ತಿಳಿಸಿದ್ದೀರಿ ಎಂದರೆ ಸರಿಯಲ್ಲ. ಆ ನಂತರ ನೀವು ಮೋಸದಿಂದ ಕ್ರಯಪತ್ರ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

21. ನಿಡಿ - 1 ರಲ್ಲಿ ರಮೇಶ ರವರ ಸಹಿ ಇದೆಯಾ ಎಂದರೆ, ಅದರಲ್ಲಿ ಕಾಣುತ್ತಿಲ್ಲ.

22. ನಿಪಿ - 1ರ ಕ್ರಯಪತ್ರ ರಮೇಶ, ಜಯಣ್ಣ, ಶೋಭಾ ಹಾಗೂ ಪ್ರೇಮ ರವರಿಗೆ ಬದ್ಧಪಡಿಸುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

23. ಈಗಲೂ ಸಹ ಚಿಕ್ಕೇಗೌಡರ ವಂಶಸ್ಥರು ದಾವಾ ಸ್ವತ್ತಿನಲ್ಲಿ ಸ್ವಾಧಿನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನೀವು ಆಗಿನಿಂದಲೂ ದಾವಾ ಸ್ವತ್ತಿಗೆ ಗೇಟ್ ಹಾಕಿಕೊಂಡು ಅಡ್ಡಿಪಡಿಸುತ್ತಿದ್ದೀರಾ ಎಂದರೆ ಸರಿಯಲ್ಲ.

24. ಸ.ನಂ.27 ರಲ್ಲಿ 14 ಗುಂಟೆಯನ್ನು ಚಿಕ್ಕೇಗೌಡರ ಅಣ್ಣ ನಿಂಗೇಗೌಡನಿಂದ ಖರೀದಿ ಮಾಡುವ ವೇಳೆ ಸದರಿ ಸರ್ವೇ ನಂಬರ್ ಹಾಕಿ ನಿಡಿ - 1 ನ್ನು ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

25. ಸದರಿ ಕ್ರಯಪತ್ರ ಸೃಷ್ಠಿ ಮಾಡುವ ವೇಳೆ ರಮೇಶ ರವರು ವಯಸ್ಕರಾಗಿದ್ದರೂ, ಅವರಿಗೆ ಗೊತ್ತಾಗುತ್ತದೆ ಎಂದು ಅವರಿಂದ ಮರೆಮಾಚಿ ಸುಳ್ಳು ಪತ್ರ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

26. ದಾವಾ ಆಸ್ತಿಯನ್ನು ಲಪಟಾಯಿಸಲು ರಮೇಶ ರವರು ಮೈನರ್ ಆಗಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

27. ಈ ದಾವೆಗೆ ಸಂಬಂಧಪಡದ ಪೋಟೋಗಳನ್ನು ಸೃಷ್ಠಿ ಮಾಡಿ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ